ಋ) ಸರ್ಕಾರದಿಂದ ಪ್ರತಿ ತಿಂಗಳೂ ಬಿಡುಗಡೆ ಆಗುತ್ತಿರುವ ಹಣ ಭರವಸೆ ಪತ್ರದ ಲಭ್ಯತೆ ಅನುಸಾರ ಹಾಗೂ ಜೇಷ್ಠತೆ ಆಧಾರದ ಮೇಲೆ ಗುತ್ತಿಗೆದಾರರ ಬಾಕಿ ಬಿಲ್ಲುಗಳಿಗೆ ಹಣ ಸಂದಾಯ ಮಾಡಲಾಗುತ್ತಿದೆ.

333 (629) ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ):– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕನ್ನು ಶಿವಮೊಗ್ಗ ಜಿಲ್ಲೆಯಿಂದ ದಾವಣಗೆರೆ ಜಿಲ್ಲೆಗೆ ಸೇರ್ಪಡೆ ಮಾಡುವ ಸಂದರ್ಭದಲ್ಲಿ ನಡೆದ ಗಲಭೆಗೆ ಸಂಬಂಧಪಟ್ಟಂತೆ ಎಷ್ಟು ಜನರ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ;

ಆ) ಸದರಿ ಗಲಭೆಗೆ ಸಂಬಂಧಪಟ್ಟಂತೆ ದಾಖಲಿಸಿಕೊಂಡಿರುವ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಸರಕಾರದ ಸ್ಪಷ್ಟ ನಿಲುವೇನು?

ಇ) ಯಾವಾಗ ಹಿಂದಕ್ಕೆ ಪಡೆಯಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು):

ಅ) 268 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಆ) ಸದರಿ ಗಲಭೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೂಡಲಾಗಿದ್ದ 11 ಮೊಕದ್ದಮೆಗಳ ಪೈಕಿ 150 ಜನರ ವಿರುದ್ಧ ಹೂಡಲಾಗಿದ್ದ ಈ ಕೆಳಕಂಡ 5 ಮೊಕದ್ದಮೆಗಳನ್ನು ಅಭಿಯೋಜನೆಯಿಂದ ದಿನಾಂಕ 12–4–2002ರಂದು ಈಗಾಗಲೇ ಹಿಂಪಡೆಯಲಾಗಿದೆ.

1. ಹೊನ್ನಾಳಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 162/97

2. ನ್ಯಾಮತಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 192/97

3. ನ್ಯಾಮತಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 197/97

4. ನ್ಯಾಮತಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 199/97

5. ನ್ಯಾಮತಿ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 201/97

ಇ) ಉಳಿದ 6 ಪ್ರಕರಣಗಳು ಪೊಲೀಸ್ ಇಲಾಖಾ ನೌಕರರಿಗೆ ಕಲ್ಲಿನಿಂದ ಹೊಡೆದು ತೀವ್ರ ಪೆಟ್ಟು ಮಾಡಿರುವಿಕೆ, ಸಮಾಜ ಕಲ್ಯಾಣ ಇಲಾಕೆಯ ಕಛೇರಿಯ ಬೀಗ ಮುರಿದು ಅಕ್ರಮ ಪ್ರವೇಶ ಮಾಡಿ ಕಾಗದ ಪತ್ರ, ಟ್ರೆಜರಿಗೆ ಬೆಂಕಿ ಹಾಕುವಿಕೆ, ಸಾರ್ವಜನಿಕ ಸ್ವತ್ತಿಗೆ ಪೆಟ್ರೋಲ್ ಸುರಿದು ಬೆಂಕಿ ಇಡುವಿಕೆ, ನ್ಯಾಮತಿ ನಾಡ ಕಛೇರಿಯ ಬೀಗ ಮುರಿದು ಅಕ್ರಮ ಪ್ರವೇಶ ಮಾಡಿ ಕಿಚ್ಚು ಇಡುವಿಕೆ, ಸರ್ಕಾರಿ ಜೀಪ್ ಸುಡುವಿಕೆ, ಪ್ರಾಥಮಿಕ ಶಾಲೆಯ ಪುಸ್ತಕ ಭಂಡಾರಕ್ಕೆ ಬೆಂಕಿ ಹಚ್ಚುವಿಕೆ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕಿನ ಕಿಟಕಿ ಮುರಿದು ಬ್ಯಾಂಕಿನ ದಾಖಲೆಗೆ ಬೆಂಕಿ ಹಚ್ಚುವಿಕೆ ಅಂತಹ ಗಂಭೀರ ಅಪರಾಧಗಳನ್ನು ಒಳಗೊಂಡಿರುತ್ತದೆ. ಆದಕಾರಣ ಈ 6 ಪ್ರಕರಣಗಳನ್ನು ಅಭಿಯೋಜನೆಯಿಂದ ಹಿಂಪಡೆಯಲಾಗಿರುವುದಿಲ್ಲ.